## ಮುನ್ನುಡಿ

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೌಶಲಗಳು ಹಾಗೂ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ. ಇಂತಹ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಲು ಹಾಗೂ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲು ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಶಿಫಾರಸ್ಸು ಮಾಡಿದೆ. ಇದರನ್ವಯ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮ "ಸಂಭ್ರಮ ಶನಿವಾರ"-ಬ್ಯಾಗ್ ರಹಿತ ದಿನ-ವನ್ನು 2020-21 ನೇ ಸಾಲಿನಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಮಹಾಮಾರಿ ಕೋವಿಡ್ ಸೋಂಕಿನ ಹರಡುವಿಕೆಯಿಂದ ಈ ಕಾರ್ಯಕ್ರಮವನ್ನು 1 ರಿಂದ 8 ನೇ ತರಗತಿ ಮಕ್ಕಳಿಗೆ 2021-2022 ಸಾಲಿನಿಂದ ಅಳವಡಿಸಲಾಗುವುದು.

ಸಂಭ್ರಮ ಶನಿವಾರದಂದು ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ 10 ವಿಷಯಗಳಲ್ಲಿ ಮಕ್ಕಳಿಗಾಗಿ ವಿದ್ಯಾರ್ಥಿ ಕೈಪಿಡಿಗಳನ್ನು ಹಾಗೂ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಹೇಗೆ ಅಳವಡಿಸಬೇಕು ಎಂಬ ಮಾರ್ಗಸೂಚಿಗಳನ್ನೊಳಗೊಂಡ ಶಿಕ್ಷಕರ ಕೈಪಿಡಿಯನ್ನು ಶಿಕ್ಷಕರಿಂದಲೇ ರಚಿಸಲ್ಪಟ್ಟಿದೆ. ವಿದ್ಯಾರ್ಥಿ ಕೈಪಿಡಿಯಲ್ಲಿ ವಿಷಯವನ್ನು ಆಳವಾಗಿ ಅರ್ಥೈಸಲು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳಲ್ಲಿ ವಿದ್ಯಾರ್ಥಿಗಳೇ ಸ್ವಂತವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ನೀಡಿದೆ. ಕಾರ್ಯಕ್ರಮ ಪ್ರಾರಂಭಿಸುವ ಮುನ್ನ ಶಿಕ್ಷಕರು ಶಿಕ್ಷಕರ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿ ಕೈಪಿಡಿಗಳು ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ಸಹಕರಿಸಿದ ಅಜೀಂ ಪ್ರೇಂ ಜೀ ಫೌಂಡೇಶನ್, ಗ್ರಾಮ್ ಸಂಸ್ಥೆ, ಮೈಸೂರು, ಉದ್ಯಮ್ ಫೌಂಡೇಶನ್ ಹಾಗೂ ಡ್ರೀಮ್ ಎ ಡ್ರೀಮ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ

## ಶಿಕ್ಷಕರ ಮಾರ್ಗದರ್ಶಿ


| | ಶೀರ್ಷಿಕೆ | ಪು.ಸಂಖ್ಯೆ |
|---|---|---|
| 1. | ಪೀಠಿಕೆ | 2 |
| 2. | ಸಂಭ್ರಮ ಶನಿವಾರ ಕಾರ್ಯಕ್ರಮದ ಪರಿಕಲ್ಪನೆ | 2 |
| 3. | ಕಾರ್ಯಕ್ರಮದ ಉದ್ದೇಶಗಳು | 3 |
| 4. | ಕಾರ್ಯಕ್ರಮ ಆಯೋಜನೆ ಮತ್ತು ಅನುಷ್ಠಾನ | 3 |
| 5. | ಶಿಕ್ಷಕರಿಗೆ ಸೂಚನೆಗಳು | 4 |
| | 5.1 ವಿದ್ಯಾರ್ಥಿಗಳಿಗೆ ಪುನಶ್ಚೇತನ ಕಾರ್ಯಕ್ರಮ ಆಯೋಜಿಸುವುದು | 5 |
| | 5.2 ವಿದ್ಯಾರ್ಥಿ ನಿರೂಪಕ/ವಿದ್ಯಾರ್ಥಿ ನಾಯಕರನ್ನು ಆಯ್ಕೆ ಮಾಡುವುದು | 6 |
| | 5.2.1 ಆಯ್ಕೆ ಮಾನದಂಡಗಳು | 6 |
| | 5.3 ನಿರೂಪಕ ವಿದ್ಯಾರ್ಥಿಗಳ ಜವಾಬ್ದಾರಿಗಳು | 7 |
| | 5.4 ಸಂಭ್ರಮ ಶನಿವಾರದ ಸಿದ್ಧತೆ | 8–9 |
| 6. | ಸಂಭ್ರಮ ಶನಿವಾರ ಕಾರ್ಯಕ್ರಮದ ಅನುಪಾಲನೆ | 9–11 |
| 7. | ಸಂಭ್ರಮ ಶನಿವಾರ – ಶೈಕ್ಷಣಿಕ ಪರಿಣಾಮಗಳು | 11–12 |
| | ಅನುಬಂಧ – 1 : ಸಂಭ್ರಮ ಶನಿವಾರದ ವಿಷಯಗಳು | 12 |
| | ಅನುಬಂಧ – 2 : ಪದೇ ಪದೇ ಕೇಳಲಾಗುವ ಪ್ರಶ್ನೆಗಳು | 13–15 |
| 8. | ರಾಷ್ಟ್ರೀಯ ಶಿಕ್ಷಣ ನೀತಿ–2020ರಲ್ಲಿ ಬ್ಯಾಗ್ ರಹಿತ ದಿನದ ಕಲ್ಪನೆ | 16 |

# ಶಿಕ್ಷಕರ ಮಾರ್ಗದರ್ಶಿ

## 1. ಪೀಠಿಕೆ

ಶಾಲಾ ಶಿಕ್ಷಣದಲ್ಲಿ ಮೌಲ್ಯ ಶಿಕ್ಷಣವು, ಶಿಕ್ಷಣದ ಗುರಿ ಮತ್ತು ಉದ್ದೇಶಗಳೊಂದಿಗೆ ಸಮ್ಮಿಳಿತಗೊಂಡಿದೆ. 1968ರ ರಾಷ್ಟ್ರೀಯ ಶಿಕ್ಷಣ ನೀತಿಯು ಪೌರಪ್ರಜ್ಞೆಯನ್ನು, ಸಂಸ್ಕೃತಿ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಕೂಡ ಪ್ರಗತಿಪರ ರಾಷ್ಟ್ರದ ಜಾತ್ಯತೀತ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿಹಿಡಿಯಲು ಮೌಲ್ಯಶಿಕ್ಷಣದ ಅಗತ್ಯವನ್ನು ಸಾರಿ ಹೇಳುತ್ತದೆ. 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿಯೂ ಸಹ ಮೌಲ್ಯಗಳು ಹಾಗೂ ನೈತಿಕ ವಿಚಾರಗಳನ್ನು ಶಾಲಾಶಿಕ್ಷಣದಲ್ಲಿ ಅತ್ಯಾವಶ್ಯಕ ಅಂಶಗಳೆಂದು ಪರಿಗಣಿಸಲಾಗಿದೆ. ಮಗುವಿನ ವ್ಯಕ್ತಿತ್ವ ನಿರ್ಮಾಣದಲ್ಲಿ ಮತ್ತು ಸಂತಸದಾಯಕ ಜೀವನ ನಡೆಸಲು ನೈತಿಕಪ್ರಜ್ಞೆ ಮತ್ತು ಮೌಲ್ಯಗಳು ಅವಶ್ಯಕವೆಂದು ಹಾಗೂ ಇದರಿಂದ ಸಮಾಜಕ್ಕೆ ಧನಾತ್ಮಕ ಕೊಡುಗೆಗಳನ್ನು ನೀಡಲು ಸಹಾಯಕಾರಿಯಾಗುವುದೆಂದು 2020ರ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿಯೂ ಉಲ್ಲೇಖಿಸಲಾಗಿದೆ.

ಶಾಲೆಗಳು ಕಲಿಕಾ ಕೇಂದ್ರಗಳಾಗಿ ವಿದ್ಯಾರ್ಥಿಯ ಜ್ಞಾನದಾಹ ತಣಿಸುವುದರ ಜೊತೆಗೆ ಜೀವನ ಕೌಶಲ ಮತ್ತು ಮೌಲ್ಯಗಳನ್ನು ಬೆಳೆಸುವ ಗುರುತರ ಜವಾಬ್ದಾರಿ ಹೊಂದಿದೆ. ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಈ ಮುಖ್ಯ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಮೌಲ್ಯಗಳನ್ನು ಮಕ್ಕಳಲ್ಲಿ ರೂಡಿಸುವ ಸಂದರ್ಭದಲ್ಲಿ ವಿಮರ್ಶಾತ್ಮಕ ಚಿಂತನೆ, ಧನಾತ್ಮಕ ಆಲೋಚನೆ, ಬೆಳೆಸಿದಾಗ ವಿದ್ಯಾರ್ಥಿಯ ದೈಹಿಕ ಮತ್ತು ಮಾನಸಿಕ ಆರೋಗ್ಯ ಸದೃಡವಾಗುತ್ತದೆ.

ಹೀಗೆ ರೂಪುಗೊಂಡ ಜೀವನ ಮೌಲ್ಯಗಳು, ಕ್ರಿಯಾತ್ಮಕ ಕೌಶಲಗಳು ಮಗುವಿನ ಜೀವನದ ಉದ್ದಕ್ಕೂ ವಿಸ್ತಾರ ಹೊಂದುತ್ತಾ ಸಾಗುತ್ತವೆ. ಕೇವಲ ಶೈಕ್ಷಣಿಕ ಸಾಧನೆಗೆ ಪ್ರಾಧಾನ್ಯತೆ ನೀಡುತ್ತಿರುವುದರಿಂದ ಮಕ್ಕಳ ಜೀವನದಲ್ಲಿ ಮೌಲ್ಯಗಳ ಬೆಳವಣಿಗೆಗೆ ಪ್ರಾಮುಖ್ಯತೆ ನೀಡಲಾಗುತ್ತಿಲ್ಲ. ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮಗುವಿನ ವ್ಯಕ್ತಿತ್ವದ ಸಮಗ್ರ ಬೆಳವಣಿಗೆಗೆ ಅವಶ್ಯಕವಾದ ಮೌಲ್ಯಗಳನ್ನು ಬಾಲ್ಯದಲ್ಲಿಯೇ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಜವಾಬ್ದಾರಿಯುತ, ಚಿಂತನಶೀಲ, ಸೂಕ್ಷ್ಮಮತಿಯುಳ್ಳ ಮುಕ್ತ ಮನಸ್ಸಿನ ಸದೃಢ ವ್ಯಕ್ತಿತ್ವ ಉಳ್ಳ ನಾಗರೀಕರಾಗಲು ಸಹಾಯವಾಗುತ್ತದೆ.

## 2. ಸಂಭ್ರಮ ಶನಿವಾರ ಕಾರ್ಯಕ್ರಮದ ಪರಿಕಲ್ಪನೆ

ಪಠ್ಯಕ್ರಮದಲ್ಲಿ ಮೌಲ್ಯ ಶಿಕ್ಷಣದ ಮಹತ್ವವನ್ನು ಬಲವಾಗಿ ಒಪ್ಪಿಕೊಳ್ಳಲಾಗಿದ್ದರೂ ಅದನ್ನು ತರಗತಿ ಕೋಣೆಯಲ್ಲಿ ಸಮ್ಮಿಳಿತಗೊಳಿಸುವುದು ಶಿಕ್ಷಕರಿಗೆ ಒಂದು ಸವಾಲೇ ಸರಿ. “ಸಂಭ್ರಮ ಶನಿವಾರ” ಕಾರ್ಯಕ್ರಮವು ಈ ಸವಾಲನ್ನು ಸಮರ್ಪಕವಾಗಿ ಎದುರಿಸಲು ಒತ್ತಾಸೆಯಾಗಿದೆ. ಪ್ರತಿ ತಿಂಗಳು ಒಂದು ಶನಿವಾರದಂದು ಬ್ಯಾಗ್ ರಹಿತ ದಿನವನ್ನು ಆಚರಿಸುವ ಕಾರ್ಯಕ್ರಮವೇ "ಸಂಭ್ರಮ ಶನಿವಾರ". ನೂತನ ಶಿಕ್ಷಣ ನೀತಿಯಲ್ಲಿಯೂ ಸಹ ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ಶಿಫಾರಸ್ಸುಗಳಲ್ಲಿ ಉಲ್ಲೇಖಿಸಿದೆ. ಈ ಕಾರ್ಯಕ್ರಮವು ಮಗುವಿನಲ್ಲಿ ಸ್ವತಂತ್ರವಾಗಿ ಯೋಚಿಸುವ,

ಸೂಕ್ಷ್ಮಗ್ರಾಹಿ, ಸಂತಸ ಮನಸ್ಸಿನ ವ್ಯಕ್ತಿತ್ವವನ್ನು ರೂಪಿಸಲು ಅವಶ್ಯಕವಾದ ಧನಾತ್ಮಕ ಮೌಲ್ಯಗಳನ್ನು ಬೆಳೆಸಲು ಸಹಾಯವಾಗುತ್ತದೆ. ಉತ್ತಮ ನಾಗರಿಕರನ್ನು ಬೆಳೆಸಲು ಪ್ರೋತ್ಸಾಹಿಸುವ ಚಟುವಟಿಕೆಯಲ್ಲಿ ತೊಡಗಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಕಾರ್ಯಕ್ರಮದ ದಿನ ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ನಾಗರಿಕ ಪ್ರಜ್ಞೆ ಬೆಳೆಸುವ, ಸಾಮಾಜಿಕ–ಭಾವನಾತ್ಮಕ ಕೌಶಲಗಳು ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸುವ ಸಂತಸದಾಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಶಾಲೆಯಲ್ಲಿ ಮಕ್ಕಳು ತಮ್ಮ ಹೆಚ್ಚಿನ ಸಮಯವನ್ನು ಗ್ರಂಥಾಲಯ, ಪ್ರಯೋಗಾಲಯ, ಕ್ರೀಡಾಂಗಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

## 3. ಕಾರ್ಯಕ್ರಮದ ಉದ್ದೇಶಗಳು

"ಸಂಭ್ರಮ ಶನಿವಾರ" ಈ ಪರಿಕಲ್ಪನೆಗೆ ಪೂರಕವಾದ ಉದ್ದೇಶಗಳು.

1. ಮಕ್ಕಳಲ್ಲಿ ಧನಾತ್ಮಕ ಬದಲಾವಣೆ ತರುವ ಮೂಲಕ ನಾಗರಿಕ/ಪೌರಪ್ರಜ್ಞೆಯನ್ನು ಬೆಳೆಸುವುದು.
2. ಚಟುವಟಿಕೆ ಆಧಾರಿತ ಅನ್ವಯಿಕ ಕಲಿಕೆಯನ್ನು ಉಂಟುಮಾಡುವುದರ ಮೂಲಕ ಮಕ್ಕಳ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು.
3. ಮಕ್ಕಳಿಗೆ ಶೈಕ್ಷಣಿಕ ಮತ್ತು ಭೌತಿಕ ಹೊರೆಯನ್ನು ಕಡಿಮೆ ಮಾಡುವುದು
4. ಮೌಲ್ಯಾಧಾರಿತ ಶಿಕ್ಷಣದ ಮೂಲಕ ಮಕ್ಕಳಲ್ಲಿ ಸಮಗ್ರ ವ್ಯಕ್ತಿತ್ವವನ್ನು ಬೆಳೆಸುವುದು.

## 4. ಕಾರ್ಯಕ್ರಮ ಆಯೋಜನೆ ಮತ್ತು ಅನುಷ್ಠಾನ :

"ಸಂಭ್ರಮ ಶನಿವಾರ" ವನ್ನು ತಿಂಗಳಲ್ಲಿ ಒಂದು ಶನಿವಾರದಂದು ನಡೆಸಲು ಉದ್ದೇಶಿಸಲಾಗಿದೆ. ಆ ಶನಿವಾರದಂದು ಮಕ್ಕಳು ಸಂತಸದಾಯಕವಾಗಿ ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಹಾಯಕವಾಗುವಂತೆ ಚಟುವಟಿಕೆ ಕೈಪಿಡಿಗಳನ್ನು ವಿದ್ಯಾರ್ಥಿಗಳಿಗೆ ರಚಿಸಲಾಗಿದೆ. ವಿವಿಧ ವಿಷಯಗಳಲ್ಲಿ ಕೈಪಿಡಿಗಳ ಮೂಲಕ ವಿದ್ಯಾರ್ಥಿಗಳನ್ನು ಬಹು ಮುಖ ಚಟುವಟಿಕೆಗಳಲ್ಲಿ ತೊಡಗಿಸಬೇಕಿದೆ. ಪ್ರತಿ ತಿಂಗಳು ಒಂದು ವಿಷಯದ ಒಂದು ಕೈಪಿಡಿಯನ್ನು ಅಳವಡಿಸಲಾಗುವುದು. ಪ್ರತಿ ಕೈಪಿಡಿಯು ನಾಗರಿಕ ಪ್ರಜ್ಞೆಯನ್ನು ಬೆಳೆಸುವಂತಹ ವಿಷಯವನ್ನು ಆಧರಿಸಿದ್ದು, ಮಕ್ಕಳು ಆಯಾ ವಿಷಯವನ್ನು ಆಳವಾಗಿ ತಿಳಿಯಲು ಪ್ರೋತ್ಸಾಹಿಸುವ ಚಟುವಟಿಕೆಗಳನ್ನು ಒಳಗೊಂಡಿದೆ. ಪ್ರತಿ ಕೈಪಿಡಿಯನ್ನು ಮೂರು ಗಂಟೆಗಳ ಕಾರ್ಯಕ್ರಮಕ್ಕೆ ಯೋಜಿಸಿದ್ದು, ಪ್ರತಿಯೊಂದು ಘಟಕವು ಒಂದು ಗಂಟೆಯ ಅವಧಿಯದ್ದಾಗಿರುವ ಮೂರು ಮುಖ್ಯ ಘಟಕಗಳನ್ನು ಹೊಂದಿರುತ್ತದೆ.

**ಅರಿವು**

ಈ ಘಟಕವು ನಿಗದಿತ ವಿಷಯದ ಕುರಿತು ವಾಸ್ತವ ಸಂಗತಿ ತಿಳಿಯುವಂತಹ ಚಟುವಟಿಕೆಗಳನ್ನು ಹೊಂದಿರುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಪ್ರಸ್ತುತ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ತಿಳಿಯಲು ವಿದ್ಯಾರ್ಥಿಗಳಿಗೆ ಸಹಾಯಕವಾಗುತ್ತದೆ. ಇದು ಹೆಚ್ಚಿನದಾಗಿ ವಿಷಯದ ಬಗ್ಗೆ ಜ್ಞಾನವನ್ನು/ತಿಳುವಳಿಕೆಯನ್ನು ಮಕ್ಕಳಲ್ಲಿ ಉಂಟುಮಾಡುತ್ತದೆ.

**ಅನುಭವ**

ನಿಗದಿತ ವಿಷಯವು ಮಕ್ಕಳು ಸ್ವ ಅನುಭವ ಅಥವಾ ಸಮುದಾಯದಲ್ಲಿನ ನೈಜ ಅನುಭವಗಳನ್ನು ಹೊಂದಲು ಪೂರಕವಾದ ಚಟುವಟಿಕೆಗಳನ್ನು ಈ ಘಟಕದಲ್ಲಿ ನೀಡಲಾಗಿದೆ. ಕಲಿಯುವ ಅಂಶಗಳನ್ನು ವಿದ್ಯಾರ್ಥಿಗಳು ತಮ್ಮ ನಿಜ ಜೀವನಕ್ಕೆ ಅನ್ವಯಿಸಿಕೊಂಡಲ್ಲಿ ಅನುಭವ ತತ್ವವಾಗುತ್ತದೆ ಎಂಬ ಆಶಯವನ್ನು ಹೊಂದಲಾಗಿದೆ.

**ಅವಲೋಕನ/ ಆಂತರಿಕ ಗೊಳಿಸುವಿಕೆ**

ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಮಕ್ಕಳು ಗಳಿಸಿದ ಅನುಭವ, ಸಂಗ್ರಹಿಸಿದ ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡುವಂತಹ ಚಟುವಟಿಕೆಗಳನ್ನು ಈ ವಿಭಾಗದಲ್ಲಿ ನೀಡಿದೆ. ಪ್ರತಿ ವಿಷಯಕ್ಕೆ ಸಂಬಂಧಿಸಿದ ಸವಾಲುಗಳು, ಪರಿಹಾರಗಳು, ಪರಿಣಾಮಗಳು ಇತ್ಯಾದಿಗಳನ್ನು ಅರಿಯಲು ಉತ್ತೇಜಿಸುತ್ತವೆ. ಸ್ವಕಲಿಕೆ ಮತ್ತು ಸ್ವಅನುಭವಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ನೆರವಾಗುವುದಲ್ಲದೇ ಪರಿಕಲ್ಪನೆಗಳನ್ನು ಅಂತರಿಕಗೊಳಿಸಲು ಪ್ರಭಾವ ಬೀರುತ್ತದೆ.

ಪ್ರತಿ ಘಟಕದಲ್ಲಿನ ಚಟುವಟಿಕೆಗಳನ್ನು **ತರಗತಿ 1–3, ತರಗತಿ 4–5 ಮತ್ತು ತರಗತಿ 6–8** ಎಂದು ವಯೋಮಾನಕ್ಕಗುಣವಾಗಿ ತರಗತಿವಾರು ಪ್ರತ್ಯೇಕ ಚಟುವಟಿಕೆಗಳನ್ನು ನೀಡಿದೆ. ಈ ಚಟುವಟಿಕೆಗಳೇ ಅಂತಿಮವಲ್ಲ. ಕೈಪಿಡಿಯಲ್ಲಿನ ನಿರ್ದಿಷ್ಟ ಚಟುವಟಿಕೆಗಳನ್ನೇ ನಿರ್ವಹಿಸಬೇಕೆಂದಿಲ್ಲ. ಶಿಕ್ಷಕರು ತಮ್ಮ ಸೃಜನಶೀಲತೆಗನುಗುಣವಾಗಿ ಇನ್ನೂ ಉತ್ತಮವಾದ ಚಟುವಟಿಕೆಗಳನ್ನು ರೂಪಿಸಬಹುದು. ಕೈಪಿಡಿಯಲ್ಲಿ ನೀಡಿರುವ ಚಟುವಟಿಕೆಗಳಿಗಿಂತಲೂ ಇನ್ನೂ ಹೆಚ್ಚಿನ ಚಟುವಟಿಕೆ ಬೇಕೆಂದೆನಿಸಿದಲ್ಲಿ ಶಿಕ್ಷಕರು ರೂಪಿಸಬಹುದಾಗಿದೆ. ಪ್ರತಿಯೊಂದು ಕೈಪಿಡಿಯಲ್ಲಿ ಹಂತವಾರು ಉದ್ದೇಶಗಳು ಮತ್ತು ಹಂತವಾರು ಕಲಿಕಾ ಫಲಗಳನ್ನು ಹೊಂದಿರುವ ಮಾರ್ಗದರ್ಶಿ ನಿಯಮಗಳನ್ನು ನೀಡಲಾಗಿದೆ. ಪ್ರತೀ ಕೈಪಿಡಿಯಲ್ಲಿನ ಚಟುವಟಿಕೆಗಳನ್ನು ಶಿಕ್ಷಕರ ಸ್ಪಷ್ಟ ಮಾರ್ಗದರ್ಶನದಲ್ಲಿ ಹಿರಿಯ ವಿದ್ಯಾರ್ಥಿಗಳು ನಡೆಸುವಂತೆ ರೂಪಿಸಲಾಗಿದೆ.

## 5. ಶಿಕ್ಷಕರಿಗೆ ಸೂಚನೆಗಳು :

"ಸಂಭ್ರಮ ಶನಿವಾರ" ಕಾರ್ಯಕ್ರಮವು ಒಂದು ವಿದ್ಯಾರ್ಥಿ ಕೇಂದ್ರಿತ ಕಾರ್ಯಕ್ರಮವಾಗಿದೆ. ಇಲ್ಲಿ ಶಿಕ್ಷಕರು ಕೇವಲ ಮಾರ್ಗದರ್ಶಕರಾಗಿ, ವಿದ್ಯಾರ್ಥಿಗಳು ಯಶಸ್ವಿಯಾಗಿ ಚಟುವಟಿಕೆಗಳನ್ನು ನಿರ್ವಹಿಸಲು ಅಗತ್ಯವಾದ ಬಾಹ್ಯ ಸಹಕಾರವನ್ನು ನೀಡಬೇಕಾಗುತ್ತದೆ. ಬಾಹ್ಯ ಸಂಪನ್ಮೂಲಗಳನ್ನು ಒದಗಿಸುವುದು, ಕಾರ್ಯಕ್ರಮದ ಆಯೋಜನೆ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಶಿಕ್ಷಕರು ಸಂಭ್ರಮ ಶನಿವಾರ ಕಾರ್ಯಕ್ರಮದ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಚಟುವಟಿಕೆಯನ್ನು ಆಯೋಜಿಸುವ ಸಂದರ್ಭದಲ್ಲಿ ಲಿಂಗಸಮಾನತೆ, ಮಾದಕ ದ್ರವ್ಯಗಳ ಸೇವನೆ ಯಂತಹ ಸೂಕ್ಷ್ಮ ವಿಷಯಗಳನ್ನು ನಿರ್ವಹಿಸುವಾಗ ಶಿಕ್ಷಕರು ಹೆಚ್ಚಿನ ಸಹಕಾರ ಮತ್ತು ಅತ್ಯಗತ್ಯ ಮಾರ್ಗದರ್ಶನವನ್ನು ನೀಡಬೇಕು. ಇಲ್ಲಿ ಶಿಕ್ಷಕರು ಸುಗಮಕಾರರಾಗಿ ಕಾರ್ಯ ನಿರ್ವಹಿಸುತ್ತಾರೆ (Facilitator).

ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಆಯೋಜಿಸುವಾಗ ಶಿಕ್ಷಕರ ಪಾತ್ರ, ನಿರ್ದಿಷ್ಟ ಜವಾಬ್ದಾರಿಗಳು ಯಾವುವು ಎಂಬುದನ್ನು ತಿಳಿಯೋಣ.

## 5.1 ವಿದ್ಯಾರ್ಥಿಗಳಿಗೆ ಪುನಃಶ್ಚೇತನ ಕಾರ್ಯಕ್ರಮ ಆಯೋಜಿಸುವುದು

ಪ್ರಸ್ತುತ ಕಾರ್ಯಕ್ರಮವು ವಿನೂತನ ಕಾರ್ಯಕ್ರಮವಾದ್ದರಿಂದ ಅನುಷ್ಠಾನಗೊಳಿಸುವ ಮುನ್ನ ವಿದ್ಯಾರ್ಥಿಗಳಿಗೆ ಒಂದು ಪುಟ್ಟ ಪುನಃಶ್ಚೇತನ ಕಾರ್ಯಕ್ರಮ ಮಾಡಿ ವಿದ್ಯಾರ್ಥಿಗಳಿಗೆ ಪೂರ್ವ ಮಾಹಿತಿ ನೀಡುವುದು ಅತ್ಯಗತ್ಯ. 'ಸಂಭ್ರಮ ಶನಿವಾರ'ವು ಕಲಿಕೆಗೆ ಪೂರಕವಾದ ನೈಜ ಅನುಭವದ ಪ್ರೇರಣೆಯನ್ನು ನೀಡುವಂತಿರಬೇಕೇ ವಿನಹ ಕಲಿಕಾ ಹೊರೆಯಾಗಬಾರದು. ಉದಾಹರಣೆಗೆ: ಮನೆಗೆಲಸ ನೀಡುವುದು ಆಗಬಾರದು. ಈ ವಿಷಯದ ಬಗ್ಗೆ ಯಾವುದೇ ಪರೀಕ್ಷೆಗಳನ್ನು ಲಿಖಿತವಾಗಿ ಮಾಡಬಾರದು. ಮಾಹಿತಿ ನೀಡುವಾಗ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಗಮನಿಸಬೇಕು.

- 1 ರಿಂದ 8ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಆಯಾ ಹಂತಕ್ಕನುಗುಣವಾಗಿ ಪ್ರತ್ಯೇಕವಾಗಿ ಅಥವಾ ಒಟ್ಟಾಗಿ, ಆಯಾ ಶಾಲಾ ಪರಿಸರದ ಸ್ಥಿತಿ ಗತಿಗಳನ್ನು ಆಧರಿಸಿ, ಪುನಃಶ್ಚೇತನ ಕಾರ್ಯಕ್ರಮವನ್ನು ಆಯೋಜಿಸುವುದು.
- ಚಟುವಟಿಕೆಗಳನ್ನು ಶಾಲಾ ಹೊರಾಂಗಣದಲ್ಲಿ ನಡೆಯುವಂತೆ ಆಯೋಜಿಸಿದರೆ ಉತ್ತಮ. ಅನಿವಾರ್ಯವಾಗಿದ್ದಲ್ಲಿ ಮಾತ್ರ ಕೊಠಡಿಗಳಲ್ಲಿ ಆಯೋಜನೆ ಮಾಡುವುದು.
- ಸಂಭ್ರಮ ಶನಿವಾರ ಕಾರ್ಯಕ್ರಮದ ಉದ್ದೇಶಗಳನ್ನು ಮಕ್ಕಳಿಗೆ ವಿವರಿಸಬೇಕು ಹಾಗೂ ತಮ್ಮಲ್ಲಿನ ಸೃಜನಶಿಲತೆಯನ್ನು ಅಭಿವ್ಯಕ್ತಿಗೊಳಿಸಲು ಹಾಗೂ ಕಲಿಕೆ ಮತ್ತು ಆಟವನ್ನು ಸಮ್ಮಿಳಿತಗೊಳಿಸಲು ಈ ಕಾರ್ಯಕ್ರಮವು ಒಂದು ಉತ್ತಮ ಸಾಧನವಾಗಿದೆ ಎಂಬುದನ್ನು ಅವರಿಗೆ ಮನದಟ್ಟು ಮಾಡಬೇಕು.
- ಮಕ್ಕಳಿಗೆ ಪ್ರಸ್ತುತ ಕಾರ್ಯಕ್ರಮದ ಉದ್ದೇಶದ ಬಗ್ಗೆ ಸ್ಪಷ್ಟ ತಿಳುವಳಿಕೆ ನೀಡುವುದು ಸೂಕ್ತ. ಇದರಿಂದ ಕಾರ್ಯ ಚಟುವಟಿಕೆ ಯಶಸ್ವಿಯಾಗಲು ಮತ್ತು ಸದ್ಬಳಕೆಯಾಗಲು ಸಾಧ್ಯವಾಗುತ್ತದೆ. ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಅನುಭವಗಳನ್ನು ಪಡೆಯಲು ಹೆಚ್ಚು ಆದ್ಯತೆ ಒದಗಿಸುವುದು. ಉದಾಹರಣೆಗೆ: ಈ ಕಾರ್ಯಕ್ರಮದ ಮೂಲಕ ಪರಿಸರ ಸ್ವಚ್ಛತಾ ಅರಿವು, ಆರೋಗ್ಯದಾಯಕ ಮತ್ತು ಸಂತಸದಾಯಕ ಜೀವನ ಶೈಲಿ ರೂಢಿಸಿಕೊಳ್ಳುವುದು, ಪರಸ್ಪರ ವ್ಯಕ್ತಿ ಗೌರವ, ಇತ್ಯಾದಿಯಂತಹ ಉತ್ತಮ ಅಭ್ಯಾಸಗಳನ್ನು ಬೆಳಸಿಕೊಳ್ಳಬಹುದು.
- ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಮಕ್ಕಳೇ ಆಯೋಜಿಸಿ ನಿರ್ವಹಿಸಲು ಸಾಧ್ಯವಾಗುವಂತೆ ಅವರನ್ನು ಸಿದ್ಧಗೊಳಿಸಿ ಪ್ರೇರೇಪಿಸಬೇಕು.
- ಸಂಭ್ರಮ ಶನಿವಾರ ಕಾರ್ಯಕ್ರಮ ಆಯೋಜಿಸಲು ಮಕ್ಕಳಿಂದಲೂ ಸಲಹೆಗಳನ್ನು ಪಡೆಯುವುದು.
- ಪ್ರಸ್ತುತ ಕಾರ್ಯಕ್ರಮದ ದಿನ ಶಾಲಾ ಬ್ಯಾಗ್, ನೋಟ್ ಪುಸ್ತಕ ಇತ್ಯಾದಿಗಳನ್ನು ಶಾಲೆಗೆ ತರುವಂತಿಲ್ಲ.
- ತಮ್ಮ ಸಹಪಾಠಿಗಳೊಂದಿಗೆ ಸೇರಿ ಪ್ರಸಕ್ತ ಸಾಮಾಜಿಕ ವಿಷಯಗಳ ಕುರಿತು ಸೃಜನಾತ್ಮಕವಾಗಿ ಹಾಗೂ ಸಂತಸದಾಯಕವಾಗಿ ವಿನೂತನ ರೀತಿಯಲ್ಲಿ ತಿಳಿದುಕೊಳ್ಳಲು ಈ ಕಾರ್ಯಕ್ರಮವು ಉತ್ತಮ ಅವಕಾಶ ಒದಗಿಸಿದೆ ಎಂದು ಪರಿಗಣಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.

- ☛ ಪ್ರತಿ ಚಟುವಟಿಕೆಯ ಅಂತ್ಯದಲ್ಲಿ ಶಿಕ್ಷಕರಿಗೆ/ನಿರೂಪಕರಿಗೆ ಸೂಚನೆಗಳನ್ನು ನೀಡಿದ್ದು ಚಟುವಟಿಕೆಗಳನ್ನು ನಿರ್ವಹಿಸುವ ಮೊದಲು ಅಗತ್ಯವಿರುವ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲು, ಸಾಮಾಗ್ರಿಗಳನ್ನು ಒದಗಿಸಲು, ಚರ್ಚೆಯನ್ನು ನಿರ್ದೇಶಿಸಲು ಸೂಚನೆಗಳು ಇತ್ಯಾದಿಗಳನ್ನು ನೀಡಿದೆ.ಅವುಗಳನ್ನು ಮುಂಚಿತವಾಗಿ ಕಡ್ಡಾಯವಾಗಿ ಓದಿಕೊಳ್ಳುವುದು.
- ☛ ಯಾವುದೇ ಚಟುವಟಿಕೆಯಲ್ಲಿ ಗುಂಪು ಕಾರ್ಯ ಮಾಡುವಾಗ ಮಾಡ್ಯೂಲ್‌ನಲ್ಲಿ ನೀಡಿರುವ Flash Card ಅಥವಾ ವಿಷಯಗಳ ಸಂಖ್ಯೆ ಕಡಿಮೆ ಎನಿಸಿದಲ್ಲಿ ಶಿಕ್ಷಕರು ಹೆಚ್ಚಿನ ವಿಷಯಗಳನ್ನು ಸೇರಿಸಬಹುದು.
- ☛ ಮಾಡ್ಯೂಲ್‌ನಲ್ಲಿನ ಚಟುವಟಿಕೆಗಳು ಸ್ಥಳೀಯ ಪರಿಸರಕ್ಕೆ ಸೂಕ್ತವೆನಿಸದಿದ್ದಲ್ಲಿ ಸ್ಥಳೀಯ ಪರಿಸರ ಮತ್ತು ಲಭ್ಯ ಸಂಪನ್ಮೂಲಗಳನ್ನು ಆಧರಿಸಿ ಇತರೆ ಚಟುವಟಿಕೆಗಳನ್ನು ಶಿಕ್ಷಕರು ಸೂಚಿಸಬಹುದಾಗಿದೆ.

## 5.2 ವಿದ್ಯಾರ್ಥಿ ನಿರೂಪಕ/ವಿದ್ಯಾರ್ಥಿ ನಾಯಕರನ್ನು ಆಯ್ಕೆ ಮಾಡುವುದು :

ವಿದ್ಯಾರ್ಥಿ ನಿರೂಪಕ/ನಾಯಕರೆಂದರೆ ಮಕ್ಕಳು ಗುಂಪಿನಲ್ಲಿ ಕಾರ್ಯನಿರ್ವಹಿಸಲು ಅಗತ್ಯ ಮಾರ್ಗದರ್ಶನ ನೀಡುವವರು. ಅವರು ಕಾರ್ಯಕ್ರಮದ ಉದ್ದೇಶಗಳನ್ನು ಅರ್ಥಮಾಡಿಕೊಂಡು ಇತರೆ ಮಕ್ಕಳು ಉದ್ದೇಶಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಅಗತ್ಯ ಮಾರ್ಗದರ್ಶನ ನೀಡಬೇಕು. ಮಕ್ಕಳ ಆಸಕ್ತಿ ಆಧರಿಸಿ ಆಯಾ ಚಟುವಟಿಕೆಗೆ ಮಕ್ಕಳನ್ನು ಆಯ್ಕೆ ಮಾಡಬೇಕು ಮತ್ತು ಜವಾಬ್ದಾರಿ ಹಂಚಬೇಕು. ಪದೇ ಪದೇ ಒಂದೇ ವಿದ್ಯಾರ್ಥಿಗೆ ನಾಯಕತ್ವದ ಜವಾಬ್ದಾರಿ ನೀಡಬಾರದು. ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನೇ ಯಾವಾಗಲೂ ನಾಯಕತ್ವಕ್ಕೆ ಆಯ್ಕೆ ಮಾಡದೇ ಎಲ್ಲರಿಗೂ ಸಮಾನ ಅವಕಾಶ ದೊರೆಯುವಂತೆ ಮಾಡುವುದು.

### 5.2.1 ಆಯ್ಕೆ ಮಾನದಂಡಗಳು :

- ಹಿರಿಯ ವಿದ್ಯಾರ್ಥಿಯನ್ನು ಕಿರಿಯ ತಂಡಕ್ಕೆ ಸುಗಮಕಾರನಾಗಿ ಆಯ್ಕೆ ಮಾಡುವುದು ಸೂಕ್ತ.
- ಉತ್ತಮ ಸಂವಹನ ಕೌಶಲ ಮತ್ತು ಭಾಷಾ ಕೌಶಲ ಹೊಂದಿದವರಿಗೆ ಕಾರ್ಯಕ್ರಮ ನಡೆಸಿಕೊಡುವ ಜವಾಬ್ದಾರಿ ನೀಡಬಹುದು.
- ಉತ್ತಮ ಶಿಸ್ತು ಹೊಂದಿರುವ ಹಾಗೂ ಸಮಯ ಪ್ರಜ್ಞೆಯುಳ್ಳ ವಿದ್ಯಾರ್ಥಿಗಳು ಸಮರ್ಪಕವಾಗಿ ನಿರ್ವಹಿಸಬಲ್ಲರು.
- ಆಯಾ ಚಟುವಟಿಕೆಗಳಿಗೆ ಸ್ಪಷ್ಟ ಸೂಚನೆ ನೀಡಲು ಸಮರ್ಥರಾದ, ಆಸಕ್ತ ಹಾಗೂ ಸೂಕ್ತ ಮಕ್ಕಳನ್ನು ಆಯ್ಕೆ ಮಾಡುವುದರಿಂದ ಕಾರ್ಯಕ್ರಮ ಯಶಸ್ವಿಯಾಗುವುದು.

ಯಾವುದೇ ಕಾರಣಕ್ಕೂ ಲಿಂಗಾಧಾರಿತ ಭೇದ ಮಾಡುವುದಾಗಲೀ ಅಥವಾ ವಿಕಲಚೇತನ ವಿದ್ಯಾರ್ಥಿಗಳು, ಆತ್ಮವಿಶ್ವಾಸದ ಕೊರತೆ ಇರುವ ವಿದ್ಯಾರ್ಥಿಗಳನ್ನು ಹಾಗೂ ಶೈಕ್ಷಣಿಕ ಸಾಧನೆ ಕಡಿಮೆ ಮಾಡಿರುವ ವಿದ್ಯಾರ್ಥಿಗಳನ್ನು ಅವಹೇಳನ ಮಾಡುವಂತಿಲ್ಲ. ವಿದ್ಯಾರ್ಥಿಗಳಲ್ಲಿ ಕೀಳರಿಮೆ ಉಂಟಾಗದಂತೆ ಸೂಕ್ಷ್ಮವಾಗಿ ಗಮನಿಸಬೇಕಾದುದು ಪ್ರತಿ ಶಿಕ್ಷಕರ ಜವಾಬ್ದಾರಿಯಾಗುತ್ತದೆ.




## 5.3 ನಿರೂಪಕ ವಿದ್ಯಾರ್ಥಿಗಳ ಜವಾಬ್ದಾರಿಗಳು :

ನಿರೂಪಕ ವಿದ್ಯಾರ್ಥಿಗಳು ಈ ಕೆಳಕಂಡ ಅಂಶಗಳನ್ನು ಅನುಪಾಲನೆ ಮಾಡಲು ಶಿಕ್ಷಕರು ನಿರೂಪಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕು. ಪ್ರತಿ ಮಾಡ್ಯೂಲ್‌ಗಳಿಗೂ ಬೇರೆ ಬೇರೆ ವಿದ್ಯಾರ್ಥಿಗಳನ್ನು ನಿರೂಪಕರಾಗಿ ಆಯ್ಕೆ ಮಾಡಬೇಕು. ಈ ನಿರೂಪಕರಿಗೆ ಪೂರ್ವಭಾವಿಯಾಗಿ ಸಾಕಷ್ಟು ಮಾಹಿತಿ, ತರಬೇತಿ, ತಿಳುವಳಿಕೆ ನೀಡಬೇಕು.

**ಅವಧಿ ಪ್ರಾರಂಭದ ಮುನ್ನ**

- ನಿರ್ದಿಷ್ಟ ವಿದ್ಯಾರ್ಥಿಯು ಸಂಬಂಧಿಸಿದ ಕೈಪಿಡಿಯನ್ನು ಒಂದು ವಾರದ ಮೊದಲೇ ಓದಿರಬೇಕು.
- ಕಾರ್ಯಕ್ರಮದ ಕುರಿತು ಒಂದು ದಿನ ಮೊದಲೇ ಸಂಪೂರ್ಣ ವಿಧಿ ವಿಧಾನಗಳ ಕುರಿತು ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಬೇಕು.
- ಸಂಬಂಧಿಸಿದ ಶಿಕ್ಷಕರ ಜೊತೆಗೆ ಚರ್ಚಿಸಿ ಮಾರ್ಗದರ್ಶನ ಪಡೆಯಬೇಕು.

**ಅವಧಿ ಪ್ರಗತಿ ಸಂದರ್ಭದಲ್ಲಿ (ಕಾರ್ಯಕ್ರಮದ ದಿನ)**

- ಕಾರ್ಯಕ್ರಮ ಅಳವಡಿಸುವಾಗ ನಿರ್ದಿಷ್ಟ ಸಮಯಪಾಲನೆ ಮಾಡಬೇಕು.
- ತನ್ನ ಗುಂಪು ಎಲ್ಲಿದೆ ಯಾವ ಕಾರ್ಯದಲ್ಲಿ ತೊಡಗಿದೆ ಎಂಬ ಅರಿವಿರಲಿ.
- ಎಲ್ಲಾ ಮಕ್ಕಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ ಎಂಬುದನ್ನು ಖಾತ್ರಿಪಡಿಸಿ ಕೊಳ್ಳಬೇಕು.
- ಚಟುವಟಿಕೆಗಳಿಗೆ ಅವಶ್ಯಕವಿರುವ ಸಾಮಾಗ್ರಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು.
- ಪ್ರಸ್ತುತ ಕಾರ್ಯಕ್ರಮದ ಗುರಿ ಉದ್ದೇಶವನ್ನು ಸಂಕ್ಷಿಪ್ತವಾಗಿ ವಿವರಿಸಬೇಕು.

**ಅವಧಿ ಪ್ರಗತಿ ಸಂದರ್ಭದಲ್ಲಿ (ಕಾರ್ಯಕ್ರಮದ ದಿನ)**

- ಚಟುವಟಿಕೆ ಪ್ರಾರಂಭಿಸುವ ಮುನ್ನ ಅಗತ್ಯ ಸೂಚನೆಗಳನ್ನು ನೀಡಬೇಕು.
- ಚಟುವಟಿಕೆ ನಡೆಸುವ ಸಮಯದಲ್ಲಿ ಸದಾ ಜಾಗೃತರಾಗಿದ್ದು, ತಾಳ್ಮೆಯಿಂದ ಕೇಳಿಸಿಕೊಂಡು ಸಕ್ರಿಯವಾಗಿ ತೊಡಗಿಕೊಳ್ಳಬೇಕು.
- ಮಕ್ಕಳ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಿರಬೇಕು.
- ಅಂಜಿಕೆ, ಹಿಂಜರಿಕೆ ಮತ್ತು ಭಯ ಹೊಂದದೆ ಅಗತ್ಯವಿದ್ದಲ್ಲಿ ಶಿಕ್ಷಕರ ಸಹಾಯ ಮಾರ್ಗದರ್ಶನ ಪಡೆಯುತ್ತಿರಬೇಕು.
- ತಂಡದ ಪ್ರತಿ ಸದಸ್ಯರನ್ನು ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಪ್ರೋತ್ಸಾಹಿಸಬೇಕು.
- ಪ್ರತಿಯೊಬ್ಬರ ಆಲೋಚನೆ, ಅಭಿಪ್ರಾಯಗಳ ಅಭಿವ್ಯಕ್ತಿಗೆ ಅವಕಾಶ ನೀಡಬೇಕು ಮತ್ತು ಸಮಯ ಪ್ರಜ್ಞೆ ಹೊಂದಿರಬೇಕು.

**ಅವಧಿ ಮುಗಿದ ನಂತರ**

- ಎಲ್ಲಾ ಮಕ್ಕಳ ಅಭಿಪ್ರಾಯ ಮತ್ತು ಕಾರ್ಯ ಚಟುವಟಿಕೆಯನ್ನು ಸಂಗ್ರಹಿಸಬೇಕು.
- ಅದನ್ನು ಕಾರ್ಯಕ್ರಮದ ಗುರಿ–ಉದ್ದೇಶಕ್ಕೆ ಸಂಬಂಧೀಕರಿಸಿ ಕ್ರೋಢೀಕರಿಸಬೇಕು.
- ಪಾಲ್ಗೊಂಡಿದ್ದಕ್ಕಾಗಿ ಎಲ್ಲರಿಗೂ ಕೃತಜ್ಞತೆ ಸಲ್ಲಿಸಬೇಕು.
- ಕಾರ್ಯಕ್ರಮದ ಕೊನೆಯಲ್ಲಿ ಪ್ರತಿಜ್ಞಾವಿಧಿ ತೆಗೆದುಕೊಳ್ಳಲು ತಂಡದವರನ್ನು ಸಿದ್ಧಗೊಳಿಸಬೇಕು.
- ಚಟುವಟಿಕೆಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಪರಿಸರ/ಸನ್ನಿವೇಶಗಳನ್ನು ಮಕ್ಕಳಿಗೆ ಪರಿಚಯಿಸುವುದು.
- ಇಂಥಹ ಸನ್ನಿವೇಶಗಳನ್ನು ಮಕ್ಕಳೇ ಸಂದರ್ಭೋಚಿತವಾಗಿ ಹೇಳುವಂತೆ ಪ್ರೇರೇಪಿಸುವುದು.

## 5.4 ಸಂಭ್ರಮ ಶನಿವಾರದ ಸಿದ್ಧತೆ

1. ಪ್ರತಿ ಸಂಭ್ರಮ ಶನಿವಾರ ನಡೆಸುವ ಸಂದರ್ಭದಲ್ಲಿ ಶಿಕ್ಷಕರು ಮೊದಲೇ ಸಂಬಂಧಿಸಿದ ಯೋಜನೆಯನ್ನು ಸಿದ್ಧಪಡಿಸಿರಬೇಕು ಹಾಗೂ ಶಿಕ್ಷಕರು ಮಕ್ಕಳಿಗೆ ಸಂಬಂಧಿಸಿದ ವಿಷಯದ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿರಬೇಕು.
2. ಎಲ್ಲ ಚಟುವಟಿಕೆಗಳನ್ನು ಆಳವಾಗಿ ಪರಿಶೀಲಿಸಿ ಪ್ರತಿ ಚಟುವಟಿಕೆಗೆ ಅಗತ್ಯ ಇರುವ ವಸ್ತು, ಸಾಮಗ್ರಿ ಸಂಪನ್ಮೂಲಗಳನ್ನು ಒಂದು ವಾರ ಮೊದಲೇ ಪಡೆದು ಸಿದ್ಧಪಡಿಸಬೇಕು.
3. ಮೇಲೆ ತಿಳಿಸಿರುವ ಸೂಚನೆಗಳ ಅನ್ವಯ ಕಾರ್ಯಗತಗೊಳಿಸುವ ತಂಡದ ನಾಯಕ ಮತ್ತು ಸದಸ್ಯರು ಮೊದಲೇ ನಿರ್ಧಾರವಾಗಿರಬೇಕು.

4. ಪ್ರತೀ ತಂಡಕ್ಕೆ ಆಯಾ ಹಂತಕ್ಕನುಗುಣವಾಗಿ ಹಿರಿಯ ತರಗತಿಗಳಿಂದ ಮಾರ್ಗದರ್ಶಕರನ್ನು ಆಯ್ಕೆ ಮಾಡಬೇಕು.

5. ತಂಡದ ನಾಯಕರನ್ನು ಆಯ್ಕೆ ಮಾಡಿದ ನಂತರ ಚಟುವಟಿಕೆ ಪೂರ್ವ, ಚಟುವಟಿಕೆ ಅವಧಿಯಲ್ಲಿ ಮತ್ತು ನಂತರ ಮೇಲೆ ತಿಳಿಸಿದಂತೆ ತಮ್ಮ ಕಾರ್ಯಭಾರದ ಸಂಪೂರ್ಣ ಮಾರ್ಗದರ್ಶನ ನೀಡಬೇಕು.

6. ಪ್ರತೀ ವರ್ಗವಾರು ತಂಡಕ್ಕೆ ಹಿರಿಯ ವಿದ್ಯಾರ್ಥಿಗಳ ನೇತೃತ್ವದಲ್ಲಿ ಮಾರ್ಗದರ್ಶನ ನೀಡಬೇಕು.

7. ವಿದ್ಯಾರ್ಥಿಗಳಿಗೆ ಶಾಲೆಯ ಎಲ್ಲಾ ಶಿಕ್ಷಕರಿಂದ ಪ್ರತೀ ಹಂತದಲ್ಲಿಯೂ ಅಗತ್ಯ ಮಾರ್ಗದರ್ಶನ ಸಿಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.

8. ತಾವು ಶಾಲೆಯಲ್ಲಿ ಏಕೈಕ ಉಪಾಧ್ಯಾಯರಿದ್ದಲ್ಲಿ ಸಂಪನ್ಮೂಲಗಳ ಸಂಗ್ರಹದಲ್ಲಿ ಮತ್ತು ಒಟ್ಟು ಮೇಲ್ವಿಚಾರಣೆ ಮಾಡುವಲ್ಲಿ ವಿದ್ಯಾರ್ಥಿ ನಾಯಕರ ಸಂಪೂರ್ಣ ಸಹಕಾರ ಪಡೆಯಬಹುದು.

9. 100 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ ಆಯಾ ವರ್ಗವಾರು ತಂಡ ರಚಿಸಿ, ಪ್ರತಿ ತಂಡಕ್ಕೆ ಪ್ರತ್ಯೇಕ ವಿದ್ಯಾರ್ಥಿ ನಾಯಕರನ್ನು ನೇಮಿಸಿ ಹಾಗೂ ಸೂಕ್ತ ಮಾರ್ಗದರ್ಶನಕ್ಕಾಗಿ ತರಗತಿ/ವಿಷಯವಾರು ಶಿಕ್ಷಕರನ್ನು ಮಾರ್ಗದರ್ಶಕರಾಗಿ ನೇಮಿಸಬೇಕು.

10. ದೊಡ್ಡ ಶಾಲೆಗಳಲ್ಲಿ ವಿದ್ಯಾರ್ಥಿ ತಂಡಗಳನ್ನು ಮುಂಚಿತವಾಗಿಯೇ ರಚಿಸಬೇಕು. ಹಾಗಾದಾಗ ತಮ್ಮ ಚಟುವಟಿಕೆಗಳನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ನೇರವಾಗಿ ನಡೆಸಲು ಸಹಾಯಕವಾಗುತ್ತದೆ.

11. ಮಕ್ಕಳನ್ನು ನಿರ್ದಿಷ್ಟ ಸ್ಥಳಗಳಿಗೆ ಮುಂಚಿತವಾಗಿಯೇ ಶಿಸ್ತಿನಿಂದ ಕಳುಹಿಸಲು ಅನುಕೂಲವಾಗುವಂತೆ ಚಟುವಟಿಕೆಗಳಿಗೆ ಅನುಗುಣವಾಗಿ ಕಾರ್ಯಕ್ರಮ ನಡೆಯುವ ಸ್ಥಳಗಳನ್ನು ಮೊದಲೇ ನಿಗದಿ ಪಡಿಸಿರಬೇಕು. ಉದಾ:- ಗ್ರಂಥಾಲಯ, ಭೋಜನಾಲಯ, ಪ್ರಯೋಗಾಲಯ, ಕ್ರೀಡಾಂಗಣ, ಸಭಾಂಗಣ ಇತ್ಯಾದಿ.

12. ಯೋಜನೆ/ಚಟುವಟಿಕೆ ತಯಾರಿಕಾ ಹಂತದಲ್ಲಿ ಪ್ರತೀ ಸಂದರ್ಭದಲ್ಲಿಯೂ, ಕಾರ್ಯಕ್ರಮ ನಡೆಸುವ ವಿದ್ಯಾರ್ಥಿಗಳು ಶಿಕ್ಷಕರ ಜೊತೆಗಿದ್ದು ಕಾರ್ಯಕ್ರಮದ ಸಿದ್ಧತೆ ಮಾಡಬೇಕು.

13. ಕೆಲವು ಚಟುವಟಿಕೆಗಳಲ್ಲಿ ಪಾತ್ರಾಭಿನಯ/ನಾಟಕ ಮಾಡಲು ಅಥವಾ ಕಥೆ ಕಟ್ಟಲು ಕೆಲವು ಸನ್ನಿವೇಶಗಳನ್ನು ನೀಡಿದೆ. ಅಗತ್ಯವಿದ್ದಲ್ಲಿ ಶಿಕ್ಷಕರು ಅಥವಾ ವಿದ್ಯಾರ್ಥಿಗಳು ತಮ್ಮ ಶಾಲಾ ಪರಿಸರಕ್ಕೆ ಅನುಗುಣವಾಗಿ ಸನ್ನಿವೇಶಗಳನ್ನು ಬದಲಾಯಿಸಬಹುದು.

## 6. "ಸಂಭ್ರಮ ಶನಿವಾರ ಕಾರ್ಯಕ್ರಮದ ಅನುಪಾಲನೆ"

1. ಸಂಭ್ರಮ ಶನಿವಾರದಂದು ವಿದ್ಯಾರ್ಥಿ ನಿರೂಪಕರೇ ಮುಂದೆ ನಿಂತು ಪ್ರಾರ್ಥನೆಯಿಂದ ಪ್ರಾರಂಭಿಸಿ ಆ ದಿನದ ನಿರ್ದಿಷ್ಟ ಚಟುವಟಿಕೆಗಳ ಮುಂದಾಳತ್ವ ವಹಿಸಬೇಕು.

2. ವಿವಿಧ ತಂಡಗಳ ಚಟುವಟಿಕೆ ಕಾರ್ಯಕ್ರಮಗಳನ್ನು ಏಕಕಾಲದಲ್ಲಿ ಪ್ರಾರಂಭಿಸಬೇಕು. ಉದಾ : 1-3, 3-5 ಮತ್ತು 6-8 ತಂಡಗಳ ಅರಿವು ಕಾರ್ಯಕ್ರಮವು ತಂಡದ ನಿರೂಪಕರ ನಾಯಕತ್ವದಲ್ಲಿ ಏಕಕಾಲಕ್ಕೆ ನಡೆಯಬೇಕು.

3. ನಿಯುಕ್ತಿ ಗೊಂಡ ಪ್ರತಿ ಶಿಕ್ಷಕರು ದಿನದ ಎಲ್ಲಾ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಬೇಕು. ಸಾಕಷ್ಟು ಶಿಕ್ಷಕರಿದ್ದಲ್ಲಿ ಪ್ರತಿ ಹಂತಕ್ಕೆ ಒಬ್ಬ ಶಿಕ್ಷಕರನ್ನು ಮಾರ್ಗದರ್ಶಕರಾಗಿ ನೇಮಿಸುವುದು. ಏಕೋಪಾಧ್ಯಾಯರಿದ್ದಲ್ಲಿ ಸರದಿಯಂತೆ ಅವಲೋಕಿಸಬೇಕು.

4. ಶಿಕ್ಷಕರೇ ನೇರವಾಗಿ ಭಾಗಿಯಾಗದೆ ಮಕ್ಕಳ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಿ ಅಗತ್ಯ ಬಿದ್ದಾಗ ಮಾರ್ಗದರ್ಶನ ಮಾಡಬೇಕು.

5. ವಿದ್ಯಾರ್ಥಿಗಳು ನಿರೀಕ್ಷಿಸದ ಹೊರತು ಶಿಕ್ಷಕರು ಮಧ್ಯ ಪ್ರವೇಶ ಮಾಡಬಾರದು.

6. ಕೆಲವು ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಸಾರಾಂಶೀಕರಿಸುವ ಅವಶ್ಯಕತೆ ಇರುತ್ತದೆ. ಅಂತಹ ಚಟುವಟಿಕೆಗಳಲ್ಲಿ ಮುಖ್ಯಾಂಶಗಳನ್ನು ಪಟ್ಟಿ ಮಾಡಿಕೊಂಡು ನಿರೂಪಕರೊಂದಿಗೆ ತಕ್ಷಣವೇ ಚರ್ಚಿಸಿ. ಇದರಿಂದ ನಿರೂಪಕರು ಪರಿಣಾಮಕಾರಿಯಾಗಿ ಸಾರಾಂಶೀಕರಿಸಲು ಅನುಕೂಲವಾಗುತ್ತದೆ.

7. ಕೆಲವು ಚಟುವಟಿಕೆಗಳಲ್ಲಿ ನಿರೂಪಕರು ಚರ್ಚೆಯನ್ನು ನಿರ್ದೇಶಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ನಿರೂಪಕರು ವಿಷಯಾಂತರ ಮಾಡುತ್ತಿದ್ದರೆ ಅದನ್ನು ಶಿಕ್ಷಕರು ಸೂಕ್ಷ್ಮವಾಗಿ ಗ್ರಹಿಸಿ ತಕ್ಷಣವೇ ನಿರೂಪಕರನ್ನು ಎಚ್ಚರಿಸಿ ಚರ್ಚೆಯನ್ನು ನಿರ್ದಿಷ್ಟ ವಿಷಯದತ್ತ ಕೊಂಡೊಯ್ಯಲು ಸೂಕ್ತ ಸೂಚನೆಗಳನ್ನು ನೀಡುವುದು.

8. ಎಲ್ಲಾ ಸದಸ್ಯರು ಸಕ್ರಿಯವಾಗಿ ಅರ್ಥಪೂರ್ಣವಾಗಿ ಪಾಲ್ಗೊಳ್ಳಲು ಶಿಕ್ಷಕರು ಪ್ರೇರೇಪಿಸಬೇಕು. ಚರ್ಚೆ, ಸಂವಾದ ಅಥವಾ ಕಾರ್ಯಕ್ರಮ ವಿಷಯಾಂತರವಾಗದಂತೆ ಅಗತ್ಯ ಬಿದ್ದಾಗ ಶಿಕ್ಷಕರು ಮಧ್ಯ ಪ್ರವೇಶ ಮಾಡಿ ಸಲಹೆ ನೀಡಬೇಕು.

9. ಯಾವುದೇ ವಿಚಾರದ ಕುರಿತು ವಿದ್ಯಾರ್ಥಿಗಳು ಶಿಕ್ಷಕರೊಡನೆ ಚರ್ಚಿಸಲು ಬಂದಾಗ ಶಿಕ್ಷಕರು ತಾಳ್ಮೆಯಿಂದ ಮಾರ್ಗದರ್ಶನ ಮಾಡಬೇಕು.

10. ಸಾಧ್ಯವಾದಷ್ಟು ಮಕ್ಕಳ ಪ್ರತಿಭೆಗೆ, ಕ್ರಿಯಾಶೀಲತೆಗೆ, ಅಭಿವ್ಯಕ್ತಿಗೆ ಮುಕ್ತ ಅವಕಾಶ ನೀಡಬೇಕು.

11. ವಿದ್ಯಾರ್ಥಿಗಳಲ್ಲಿ ಭಯ, ನಾಚಿಕೆ ಮತ್ತು ಹಿಂಜರಿಯುವಿಕೆ ಕಂಡುಬಂದ ಸಂದರ್ಭದಲ್ಲಿ ಶಿಕ್ಷಕರು ಧೈರ್ಯ ತುಂಬಿ ಅವರನ್ನು ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು.

12. ಯಾವುದೇ ಮಗುವಿನ 'ಮಕ್ಕಳ ಹಕ್ಕುಗಳು' ಉಲ್ಲಂಘನೆಯಾಗದಂತೆ ಶಿಕ್ಷಕರು ಎಚ್ಚರಿಕೆ ವಹಿಸಬೇಕು.

13. ಅರಿವು, ಅನುಭವ ಮತ್ತು ಅವಲೋಕನ ಚಟುವಟಿಕೆಗಳನ್ನು ನಡೆಸಿದ ನಂತರ ಎಲ್ಲಾ ಹಂತದ ಮಕ್ಕಳನ್ನು ಶಾಲಾ ಮೈದಾನದಲ್ಲಿ ಒಟ್ಟಾಗಿ ಸೇರಿಸಿ, "ಪ್ರತಿಜ್ಞಾ ವಿಧಿ"ಯನ್ನು ನಿರ್ವಹಿಸುವುದು.

14. ಪ್ರತಿ ವಿಷಯದಲ್ಲಿನ ಮೌಲ್ಯಗಳು ಮತ್ತು ಕೌಶಲಗಳನ್ನು ಮಕ್ಕಳು ಆಂತರೀಕರಣಗೊಳಿಸಿಕೊಳ್ಳಲು ಸಹಾಯಕವಾಗುವಂತೆ ಪ್ರತಿ ಮಾಡ್ಯೂಲ್‌ನ ಅಂತ್ಯದಲ್ಲಿ ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದೆ. ಅವುಗಳನ್ನು ದಿನನಿತ್ಯದ ಪಠ್ಯ ಬೋಧನೆ ವಿಷಯಗಳೊಂದಿಗೆ ಅಂತರ್ಗತಗೊಳಿಸಿ ನಿರ್ವಹಿಸುವುದು.

15. ಶಾಲೆಯಲ್ಲಿ ನಡೆದ 'ಸಂಭ್ರಮ ಶನಿವಾರ' ಕಾರ್ಯಕ್ರಮದ ವರದಿಯನ್ನು ದಾಖಲಿಸಿ ಇಡುವುದು.

16. ಇದೇ ರೀತಿಯ ಚಟುವಟಿಕೆಗಳನ್ನು ಶಾಲೆಯ ಬಿಡುವಿನ ವೇಳೆಯಲ್ಲಿ ಆಯೋಜಿಸಲು ಕ್ರಮವಹಿಸುವುದು.

## 7. "ಸಂಭ್ರಮ ಶನಿವಾರ" – ಶೈಕ್ಷಣಿಕ ಪರಿಣಾಮಗಳು

1. ಬ್ಯಾಗ್ ರಹಿತ ದಿನವನ್ನು ಮಕ್ಕಳಲ್ಲಿ ನಾಗರಿಕ ಪ್ರಜ್ಞೆ ಬೆಳೆಸಲು ಪೂರಕ ಚಟುವಟಿಕೆಗಳಾಗಿ ಪರಿಚಯಿಸುವಲ್ಲಿ ಮಾಡ್ಯೂಲ್‌ಗಳನ್ನು ಹೊರತರಲಾಗಿದೆ.

2. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಚಟುವಟಿಕೆ ಆಧಾರಿತ ಮಾಡ್ಯೂಲ್‌ಗಳು ಮಕ್ಕಳ ಅಭಿರುಚಿಯನ್ನು ಹೆಚ್ಚಿಸುತ್ತವೆ.

3. ಮಕ್ಕಳಲ್ಲಿ ನಾಗರಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಪ್ರತಿಯೊಂದು ಮಾಡ್ಯೂಲ್‌ನಲ್ಲಿಯೂ ಅವಕಾಶವಿದ್ದು, ಮಕ್ಕಳಿಗೆ ಸಹಕಾರಿಯಾಗಿದೆ.

4. ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗದಂತೆ ಚಟುವಟಿಕೆಗಳು ರಚಿತವಾಗಿದೆ.

5. ಸಂವಿಧಾನದ ಆಶಯದಂತೆ ಲಿಂಗತಾರತಮ್ಯವಿಲ್ಲದ, ಸ್ವಾಸ್ಥ್ಯ–ಆರೋಗ್ಯ ಜೀವನ ನಡೆಸಲು ಅವಕಾಶ ಮತ್ತು ಪೂರ್ವ ಜ್ಞಾನವನ್ನು ಮಕ್ಕಳಲ್ಲಿ ಉಂಟುಮಾಡುತ್ತದೆ.

   **ಉದಾ :** ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿಯನ್ನು ಮೂಡಿಸಿ, ಮುಂದೆ ಮಾದಕ ವಸ್ತುಗಳನ್ನು ಬಳಸುವುದನ್ನು ತಿರಸ್ಕರಿಸುತ್ತಾನೆ. ಬಳಸುವದನ್ನು ನಿಷೇಧಿಸುವ ಪ್ರಜ್ಞೆ ಮಕ್ಕಳಲ್ಲಿ ಉಂಟಾಗುತ್ತದೆ.

6. ಆರೋಗ್ಯವಂತ ನಾಗರೀಕನಾಗಲು ಬೇಕಾದ ಪೂರ್ವ ಜ್ಞಾನವನ್ನು ಪ್ರತಿ ಮಾಡ್ಯೂಲ್‌ಗಳಿಂದ ಪಡೆಯಬಹುದಾಗಿದೆ. ಇದು ಸಂವಿಧಾನದ ವ್ಯಕ್ತಿ ಸ್ವಾತಂತ್ರ್ಯವನ್ನು ಪುಷ್ಟೀಕರಿಸಿದಂತಾಗಿದೆ.

7. ಮಕ್ಕಳ ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಕಾಪಾಡುವ ಹೊಣೆಗಾರಿಕೆ ಸರ್ಕಾರದ ಮೇಲಿರುವುದರಿಂದ (I C D S, M D M ಯೋಜನೆಗಳು) ಇವುಗಳ ಅನುಷ್ಠಾನ ಶಿಕ್ಷಕರ ಜವಾಬ್ದಾರಿಯಾಗಿರುವುದರಿಂದ ಶಿಕ್ಷಕರಿಗೆ ಹೆಚ್ಚುವರಿ ಕಾರ್ಯವೆನಿಸುವುದಿಲ್ಲ.

8. ಸಂಜ್ಞಾನಾತ್ಮಕ ಬೆಳವಣಿಗೆಗೆ ಅನುಕೂಲವಾಗುವಂತಹ ಕಲಿಕೆಗೆ ಅವಕಾಶ ಕಲ್ಪಿಸಿದೆ.

9. ಈ ಮಾಡ್ಯೂಲ್‌ಗಳಲ್ಲಿ ರಚನಾವಾದವನ್ನು ಆಧರಿಸಿದ ಜ್ಞಾನ ಸಂರಚನೆಗೆ ಒತ್ತು ನೀಡಲಾಗಿದೆ.

10. ಕಲಿಕೆಯ ಬಹು ವ್ಯಾಖ್ಯಾನ ಮತ್ತು ಅಭಿವ್ಯಕ್ತಿಗೆ ಅವಕಾಶ ಕಲ್ಪಿಸಿದೆ.

11. ಗುಂಪು ಚಟುವಟಿಕೆಗಳಿಗೆ ಹೆಚ್ಚು ಪ್ರಾಧ್ಯಾನ್ಯತೆ ನೀಡಿರುವುದರಿಂದ ಮಕ್ಕಳು ತಮ್ಮನ್ನು ಸಂಪೂರ್ಣವಾಗಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಹಾಯಕವಾಗಿದೆ ಹಾಗೂ ಸಹ ಕಲಿಕೆ ಉಂಟಾಗುತ್ತದೆ.

12. ಮಕ್ಕಳು ಪ್ರಶ್ನೆಗಳನ್ನು ತಾವೇ ರೂಪಿಸಲು ಪ್ರೇರಕವಾಗಿದೆ.

## ಅನುಬಂಧ – I

## ಸಂಭ್ರಮ ಶನಿವಾರದ ವಿಷಯಗಳು

1. ಸಾರ್ವಜನಿಕ ಸೌಕರ್ಯಗಳು ಮತ್ತು ನನ್ನ ಜವಾಬ್ದಾರಿ.
2. ಲಿಂಗತ್ವ ಸಮಾನತೆಗೆ ಪ್ರೋತ್ಸಾಹ.
3. ಪೌಷ್ಠಿಕತೆ, ಸ್ವಾಸ್ಥ್ಯ ಮತ್ತು ಶುಚಿತ್ವ.
4. ಮಾದಕ ವಸ್ತುಗಳ ದುರ್ಬಳಕೆ ತಡೆಗಟ್ಟುವಿಕೆ ಮತ್ತು ನಿರ್ವಹಣೆ.
5. ಆರೋಗ್ಯ ಜೀವನ ಶೈಲಿ.
6. ಹಿಂಸೆ, ಅಪರಾಧ, ಅಪಘಾತಗಳ ಸಂದರ್ಭಗಳಲ್ಲಿ ರಕ್ಷಣೆ ಹಾಗೂ ಭದ್ರತೆ.
7. ಆಧುನಿಕ ತಂತ್ರಜ್ಞಾನ ಸಾಧನಗಳು ಮತ್ತು ಅಂತರ್ಜಾಲದ ಸದ್ಬಳಕೆ.
8. ಸಾರ್ವಜನಿಕ ನೈರ್ಮಲ್ಯ–ಘನತ್ಯಾಜ್ಯದ ನಿರ್ವಹಣೆಯ ಅಗತ್ಯತೆ ಮತ್ತು ವಿಧಾನಗಳು.
9. ರಸ್ತೆ ಸುರಕ್ಷತೆ.
10. ವಿಶೇಷ ಚೇತನ ಉಳ್ಳ ವ್ಯಕ್ತಿಗಳೊಂದಿಗೆ ಸಂವಹನ.

## ಅನುಬಂಧ – II

# ಪದೇ ಪದೇ ಕೇಳಲಾಗುವ ಪ್ರಶ್ನೆಗಳು

**1. ಏಕೋಪಧ್ಯಾಯ ಶಾಲೆಯಲ್ಲಿ ಸಂಭ್ರಮ ಶನಿವಾರವನ್ನು ಹೇಗೆ ಆಚರಿಸುವುದು?**

ಏಕೋಪಧ್ಯಾಯ ಶಾಲೆಗಳಲ್ಲಿ ನಿರೂಪಕರನ್ನು ಮುಂಚಿತವಾಗಿಯೇ ಸಿದ್ಧತೆಗೊಳಿಸುವುದು. ನಿರೂಪಕ ವಿದ್ಯಾರ್ಥಿಗಳನ್ನು ನೇಮಿಸಿ ಅವರುಗಳ ಸಹಾಯದಿಂದ ಅನುಪಾಲನೆ ಮಾಡಲು ಶಿಕ್ಷಕರು ನಿರೂಪಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕು. ಉಪಾಧ್ಯಾಯರು ಎಲ್ಲಾ ಹಂತದ ಚಟುವಟಿಕೆಗಳನ್ನು ಒಂದೊಂದಾಗಿ ಪರಿಶೀಲಿಸುವುದು.

**2. 100 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ಗುಂಪುಗಳನ್ನು ರಚಿಸುವುದು ಹೇಗೆ?**

ವಿದ್ಯಾರ್ಥಿಗಳನ್ನು ಚಿಕ್ಕ ಗುಂಪುಗಳಾಗಿ ವಿಂಗಡಿಸಿ, ಪ್ರತಿ ಗುಂಪಿಗೆ ಪ್ರತ್ಯೇಕ ನಿರೂಪಕರನ್ನು ನೇಮಿಸುವುದು. ಉದಾಹರಣೆಗೆ : 100 ವಿದ್ಯಾರ್ಥಿಗಳಿದ್ದಲ್ಲಿ 25 ವಿದ್ಯಾರ್ಥಿಗಳ 4 ಗುಂಪುಗಳನ್ನು ಮಾಡಿ ಪ್ರತಿ ಗುಂಪಿಗೂ ಒಬ್ಬ ನಿರೂಪಕರನ್ನು ನೇಮಿಸುವುದು. ಪ್ರತಿ ಗುಂಪುಗಳಿಗೆ ಮೇಲ್ವಿಚಾರಣೆಗಾಗಿ ಶಿಕ್ಷಕರುಗಳನ್ನು ನೇಮಿಸುವುದು.

**3. ಯಾವುದೇ ಒಂದು ಹಂತದಲ್ಲಿನ ಚಟುವಟಿಕೆಗಳು ನಿರ್ದಿಷ್ಟ ಅವಧಿಗಿಂತಲೂ ಮೀರಿದಲ್ಲಿ ಏನು ಮಾಡಬೇಕು?**

ಯಾವುದೇ ಒಂದು ಹಂತದ ಚಟುವಟಿಕೆಯು ನಿರ್ದಿಷ್ಟ ಅವಧಿಗಿಂತಲೂ ಹೆಚ್ಚಿನ ಸಮಯ ತೆಗೆದುಕೊಂಡಲ್ಲಿ ಉಳಿದ ಹಂತದವರು ಆ ಚಟುವಟಿಕೆ ಮುಗಿಯುವವರೆಗೂ ಕಾಯಬೇಕು. ಎಲ್ಲಾ ಹಂತಗಳ ಚಟುವಟಿಕೆಗಳು ಪೂರ್ಣಗೊಳಿಸಿದ ನಂತರ ಎಲ್ಲಾ ವಿದ್ಯಾರ್ಥಿಗಳು ಒಟ್ಟಾಗಿ ಸೇರಿ ಪ್ರತಿಜ್ಞಾ ವಿಧಿಯನ್ನು ಮಾಡಬೇಕು. ಸಾಧ್ಯವಾದಷ್ಟು ಎಲ್ಲಾ ಹಂತದವರು ನಿರ್ದಿಷ್ಟ ಅವಧಿಯಲ್ಲಿಯೇ ಚಟುವಟಿಕೆಗಳನ್ನು ಪೂರೈಸಬೇಕು.

**4. ಯಾವುದಾದರೂ ಒಂದು ವಿಷಯ ಒಂದು ಶನಿವಾರ ತಪ್ಪಿದಲ್ಲಿ ಏನು ಮಾಡುವುದು?**

ಆ ವಿಷಯವನ್ನು ಮುಂದಿನ ವಾರ ಅಳವಡಿಸಬಹುದು. ಹಾಗಾದಲ್ಲಿ ಆ ತಿಂಗಳು ಎರಡು ಶನಿವಾರಗಳಂದು ಸಂಭ್ರಮ ಶನಿವಾರವನ್ನು ಆಚರಿಸಬಹುದು.

**5. ಶಿಕ್ಷಕರ ಸಂಖ್ಯೆ ಜಾಸ್ತಿ ಇದ್ದು ಮಕ್ಕಳ ಸಂಖ್ಯೆ ಕಡಿಮೆ ಇದ್ದರೆ ಏನು ಮಾಡುವುದು?**

ಶಿಕ್ಷಕರ ಸಂಖ್ಯೆ ಜಾಸ್ತಿ ಇದ್ದು ಮಕ್ಕಳ ಸಂಖ್ಯೆ ಕಡಿಮೆ ಇದ್ದಲ್ಲಿ ಕಡಿಮೆ ಸಂಖ್ಯೆಯ ವಿದ್ಯಾರ್ಥಿ ನಿರೂಪಕರನ್ನು ನೇಮಿಸಿ ಮಕ್ಕಳು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಶಿಕ್ಷಕರು ಪ್ರೇರೇಪಿಸುವುದು.

**6. ಕಾರ್ಯಕ್ರಮದ ಕುರಿತು ಮಕ್ಕಳಿಂದ ಮತ್ತು ಶಿಕ್ಷಕರಿಂದ ಹಿಮ್ಮಾಹಿತಿ ಪಡೆಯಬೇಕೆ?**

ಹೌದು. ಸಂಭ್ರಮ ಶನಿವಾರವು ವಿನೂತನ ಕಾರ್ಯಕ್ರಮವಾಗಿರುವುದರಿಂದ ಕಾರ್ಯಕ್ರಮದ ಅಳವಡಿಕೆಯನ್ನು ಉತ್ತಮಪಡಿಸಲು ಶಿಕ್ಷಕರಿಂದ ಮತ್ತು ಮಕ್ಕಳಿಂದ ಹಿಮ್ಮಾಹಿತಿ ಪಡೆಯುವುದು

ಸೂಕ್ತ. ಹಿಮ್ಮಾಹಿತಿಯನ್ನು ಮೌಖಿಕವಾಗಿ ಪಡೆಯಬಹುದು. ಹಿಮ್ಮಾಹಿತಿಯನ್ನು ಆಧರಿಸಿ ಮುಂದಿನ ತಿಂಗಳ ಕಾರ್ಯಕ್ರಮವನ್ನು ಇನ್ನೂ ಉತ್ತಮ ರೀತಿಯಲ್ಲಿ ಆಯೋಜಿಸಲು ಅನುಕೂಲವಾಗುತ್ತದೆ.

**7. ಪ್ರತಿ ತಿಂಗಳು ಕಾರ್ಯಕ್ರಮವನ್ನು ಆಯೋಜಿಸಿದಾಗ ಶಿಕ್ಷಕರು ನಿರ್ವಹಿಸಬೇಕಾದ ದಾಖಲೆಗಳು ಏನು?**

ಪ್ರತಿ ತಿಂಗಳ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಗುಂಪು ರಚನೆ, ಶಿಕ್ಷಕರ ನಿಯೋಜನೆ, ವಿವಿಧ ಹಂತಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮಾಡಬೇಕಾದ ಕರ್ತವ್ಯಗಳ ಹಂಚಿಕೆ, ವಿವಿಧ ಚಟುವಟಿಕೆಗಳಲ್ಲಿನ ಉತ್ತಮ ಅಂಶಗಳು, ಸುಧಾರಣೆ ಮಾಡಬಹುದಾದ ಅಂಶಗಳು ಇತ್ಯಾದಿ ಅಂಶಗಳು ಇರುವ ವರದಿಯನ್ನು ಸಿದ್ದಪಡಿಸುವುದು. ಮಕ್ಕಳು ಬಿಡಿಸಿರುವ ಚಿತ್ರಗಳು, ಪೋಸ್ಟರ್‌ಗಳು, ಪ್ರಬಂಧಗಳು ಇತ್ಯಾದಿ ದಾಖಲೆಗಳನ್ನು ಸಂಗ್ರಹಿಸಿ ಇಡುವುದು.

**8. ವಿಷಯ ಶಿಕ್ಷಕರು ಯಾವ ರೀತಿಯಲ್ಲಿ ಸಂಭ್ರಮ ಶನಿವಾರವನ್ನು ತಮ್ಮ ಪಾಠಗಳಿಗೆ ಅಳವಡಿಸಿಕೊಳ್ಳುವುದು?**

ಶಾಲೆಯ ಎಲ್ಲಾ ಶಿಕ್ಷಕರು ಸಂಭ್ರಮ ಶನಿವಾರದ ಚಟುವಟಿಕೆಗಳನ್ನು ತಮ್ಮ ತಮ್ಮ ವಿಷಯಗಳಿಗೆ ಬೋಧನೆಯಲ್ಲಿ ಅಳವಡಿಸಿಕೊಳ್ಳಬಹುದು. ಉದಾಹರಣೆಗೆ 'ಸಾರ್ವಜನಿಕ ಸೌಕರ್ಯಗಳು ಮತ್ತು ನನ್ನ ಜವಾಬ್ದಾರಿ' ಕನ್ನಡ ವಿಷಯದಲ್ಲಿ ಪ್ರಬಂಧ ವಿಷಯವಾಗಿ, ಇಂಗ್ಲಿಷ್ ವಿಷಯದವರು ಲಭ್ಯವಿರುವ ಕಟ್ಟಡಗಳ ಪಟ್ಟಿಯನ್ನು ಇಂಗ್ಲಿಷ್ ನಲ್ಲಿ ಮಾಡಬಹುದು, ಈ ಪಟ್ಟಿಯಲ್ಲಿರುವಂತೆ ವಿದ್ಯಾರ್ಥಿಗಳಿಗೆ/ನಾಗರಿಕರಿಗೆ ಅನುಕೂಲವಾಗುವ ಸೌಲಭ್ಯಗಳನ್ನು ಪಟ್ಟಿ ಮಾಡಲು ತಿಳಿಸಬಹುದು, ವಿಜ್ಞಾನ ವಿಷಯದವರು ಅವುಗಳ ವೈಜ್ಞಾನಿಕ ಲಾಭಗಳನ್ನು ತಿಳಿಸುವುದು, ಸಮಾಜ ವಿಜ್ಞಾನದವರು ಸಮಾಜದಲ್ಲಿ ಅವುಗಳ ಉಪಯೋಗಗಳನ್ನು ಬೋಧನೆಯ ಸಂದರ್ಭದಲ್ಲಿ ತಮ್ಮ ಪಾಠಗಳಲ್ಲಿ ಅಳವಡಿಸಿಕೊಳ್ಳವುದು. ಹೀಗೆಯೇ ಎಲ್ಲಾ ಚಟುವಟಿಕೆಗಳಿಗೆ ಶೈಕ್ಷಣಿಕವಾಗಿ ಬೋಧನೆಗೆ ಅಳವಡಿಸಿಕೊಳ್ಳಬಹುದು.

**9. ಶಿಕ್ಷಕರಿಗೆ ಸಂಭ್ರಮ ಶನಿವಾರದ ಚಟುವಟಿಕೆಗಳಿಂದ ಕಾರ್ಯಭಾರದ ಒತ್ತಡ ಹೆಚ್ಚಾಗುವುದಿಲ್ಲವೆ ?**

ಖಂಡಿತವಾಗಿಯೂ ಇಲ್ಲ. ಶಿಕ್ಷಕರು ಇಲ್ಲಿ ಕೇವಲ ಮಾರ್ಗದರ್ಶಕರಾಗಿ ಕರ್ತವ್ಯವನ್ನು ಮಾತ್ರ ಮಾಡಬೇಕಾಗಿರುತ್ತದೆ. ನಿರೂಪಕ ವಿದ್ಯಾರ್ಥಿಗಳೇ ನಿರ್ವಹಣೆ ಮಾಡುವುದರಿಂದ ಅಂತಹ ಒತ್ತಡ ಆಗುವುದಿಲ್ಲ. ಇಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಹೆಚ್ಚು ಅವಕಾಶ ಕಲ್ಪಿಸಬೇಕಾಗಿರುತ್ತದೆ.

**10. ವಿವಿಧ ಚಟುವಟಿಕೆಗಳಲ್ಲಿ ಚಿತ್ರಗಳನ್ನು ನೀಡಿ ಪ್ರತಿಗಳನ್ನು ಎಲ್ಲಾ ಮಕ್ಕಳಿಗೆ ಹಂಚುವ ಚಟುವಟಿಕೆಗಳಿದ್ದರೆ ಅವುಗಳನ್ನು ಮುದ್ರಿಸಲು ಏನು ಮಾಡಬೇಕು?**

ಶಾಲೆಯಲ್ಲಿ ಹಾಗೂ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಚಟುವಟಿಕೆಗಳಿಗೆ ಅಗತ್ಯವಾದ ಸಾಮಾಗ್ರಿಗಳನ್ನು ಒದಗಿಸುವುದು.

**11. ಸಂಭ್ರಮ ಶನಿವಾರದ ಚಟುವಟಿಕೆಗಳನ್ನು ಆಯೋಜಿಸಲು ಆರ್ಥಿಕ ಸಂಪನ್ಮೂಲ ಹೇಗೆ ಸಾಧ್ಯ?**

ಸಂಭ್ರಮ ಶನಿವಾರದ ಚಟುವಟಿಕೆಗಳನ್ನು ಆಯೋಜಿಸಲು ಆರ್ಥಿಕ ಸಂಪನ್ಮೂಲದ ಅಗತ್ಯವಿರುವುದಿಲ್ಲ. ಯಾವುದೇ ಚಟುವಟಿಕೆಗಳನ್ನು ಆಯೋಜಿಸಲು ಶಾಲೆಯಲ್ಲಿ ಹಾಗೂ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನೇ ಬಳಕೆ ಮಾಡುವುದು.

**12. ಸಂಭ್ರಮ ಶನಿವಾರದ ಚಟುವಟಿಕೆಗಳ ವರದಿಯನ್ನು ಶಾಲಾ ಹಂತದಲ್ಲಿಯೇ ಸಂಗ್ರಹಿಸಿ ಇಡಬೇಕೇ ?**

ಹೌದು, ಸಂಭ್ರಮ ಶನಿವಾರದ ಚಟುವಟಿಕೆಗಳ ವರದಿಯನ್ನು ಶಾಲಾ ಹಂತದಲ್ಲಿಯೇ ಸಂಗ್ರಹಿಸಿ ಇಡಬೇಕಾಗುತ್ತದೆ. ಇಲಾಖೆಯ ಅಧಿಕಾರಿಗಳು ಶಾಲಾ ಭೇಟಿ ಸಂದರ್ಭದಲ್ಲಿ ಕೇಳಿದಾಗ ಮಾಹಿತಿ ನೀಡಬೇಕಾಗಿರುತ್ತದೆ.

**13. ಸಂಭ್ರಮ ಶನಿವಾರದ ಚಟುವಟಿಕೆಗಳು ಆಯೋಜಿಸುವಾಗ ಎಚ್ಚರವಹಿಸಲೇ ಬೇಕಾಗಿರುವ ಅಂಶ ಯಾವುದು ?**

ಸಂಭ್ರಮ ಶನಿವಾರದ ಚಟುವಟಿಕೆಗಳು ಆಯೋಜಿಸುವಾಗ ಎಚ್ಚರವಹಿಸಲೇ ಬೇಕಾಗಿರುವ ಅಂಶಗಳೆಂದರೆ ಪ್ರತಿ ಗುಂಪುಗಳಿಗೆ ಮೇಲ್ವಿಚಾರಕ ಶಿಕ್ಷಕರನ್ನು ಕಡ್ಡಾಯವಾಗಿ ನೇಮಿಸುವುದು. ಏಕೋಪಾಧ್ಯಾಯ ಶಾಲೆಗಳಿದ್ದರೆ ವಿದ್ಯಾರ್ಥಿ ನಿರೂಪಕರನ್ನು ನೇಮಿಸಿ ತಪ್ಪದೇ ಅವರ ಮೇಲ್ವಿಚಾರಣೆ ಮಾಡುವುದು. ಹೆಚ್ಚುವರಿ ಶಿಕ್ಷಕರನ್ನು ಪ್ರತಿ ಸಂಭ್ರಮ ಶನಿವಾರಕ್ಕೆ ಒಬ್ಬರಂತೆ ಉಸ್ತುವಾರಿಯಾಗಿ ನೇಮಿಸುವುದು. ಕ್ಷೇತ್ರ ಭೇಟಿ ಅಥವಾ ಪ್ರತ್ಯಕ್ಷ ಅನುಭವಗಳಿಗೆ ಭೇಟಿ ನೀಡಿದಾಗ ಮುನ್ನೆಚ್ಚರಿಕೆ ವಹಿಸುವುದು ಕಡ್ಡಾಯವಾಗಿರುತ್ತದೆ.

**14. ಮಾಡ್ಯೂಲ್‌ನಲ್ಲಿ ಉಲ್ಲೇಖಿಸಿರುವ ಚಟುವಟಿಕೆಗಳನ್ನು ಮಾತ್ರ ನಿರ್ವಹಿಸಬೇಕೇ ?**

ಶಿಕ್ಷಕರು ತಮ್ಮ ಸೃಜನಶೀಲತೆಗೆ ಅನುಗುಣವಾಗಿ ಮತ್ತು ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಚಟುವಟಿಕೆಗಳನ್ನು ಬದಲಾಯಿಸಬಹುದು. ಆದರೆ ವಿಷಯಾಂತರ ಆಗಬಾರದು. ಪಾತ್ರಾಭಿನಯ ಸಂದರ್ಭದಲ್ಲಿ ಮಾಡ್ಯೂಲ್‌ಗಳಲ್ಲಿ ನೀಡಿರುವ ಸನ್ನಿವೇಶಗಳನ್ನು ಹೊರತುಪಡಿಸಿ, ಶಿಕ್ಷಕರು ಅಥವಾ ವಿದ್ಯಾರ್ಥಿಗಳು ಅದಕ್ಕಿಂತಲೂ ಉತ್ತಮವಾದ ಸನ್ನಿವೇಶಗಳನ್ನು ರಚಿಸಬಹುದಾದಲ್ಲಿ ಅವುಗಳನ್ನು ಬಳಸಿಕೊಳ್ಳಬಹುದು.

**15. ಬಹುತೇಕ ಚಟುವಟಿಕೆಗಳಲ್ಲಿ ಸೂಚಿಸಿದಂತೆ ವಿದ್ಯಾರ್ಥಿಗಳ 5–6 ಗುಂಪುಗಳಿಗೇ ಸೀಮಿತವಾಗಬೇಕೆ?**

ನಿಮ್ಮ ಶಾಲೆಯಲ್ಲಿನ ಮಕ್ಕಳ ಸಂಖ್ಯೆಗಳಿಗೆ ಅನುಗುಣವಾಗಿ ಗುಂಪುಗಳ ಸಂಖ್ಯೆ ಮತ್ತು ಗುಂಪುಗಳಲ್ಲಿರುವ ಮಕ್ಕಳ ಸಂಖ್ಯೆಯನ್ನು ನಿರ್ಧರಿಸುವುದು.

**16. ಮಾಡ್ಯೂಲ್‌ನಲ್ಲಿ ನೀಡಿರುವ ಸಲಹಾತ್ಮಕ ಚಟುವಟಿಕೆಗಳನ್ನು ಸಂಭ್ರಮ ಶನಿವಾರದಂದೇ ನಿರ್ವಹಿಸಬೇಕೇ?**

ಪರಿಕಲ್ಪನೆಯನ್ನು ಆಂತರೀಕರಣಗೊಳಿಸಲು (Internalisation) ಸಲಹಾತ್ಮಕ ಚಟುವಟಿಕೆಗಳನ್ನು ನೀಡಿರುವುದರಿಂದ ಸಂಭ್ರಮ ಶನಿವಾರದಂದೇ ನಿರ್ವಹಿಸುವ ಅಗತ್ಯವಿಲ್ಲ. ಇವುಗಳನ್ನು ಪಠ್ಯಪುಸ್ತಕ ಚಟುವಟಿಕೆಗಳಾಗಿ ಅಥವಾ ಯೋಜನಾ ಕಾರ್ಯಗಳಾಗಿ ಬಳಸಬಹುದು.

# ರಾಷ್ಟ್ರೀಯ ಶಿಕ್ಷಣ ನೀತಿ-2020ರಲ್ಲಿ ಬ್ಯಾಗ್ ರಹಿತ ದಿನದ ಕಲ್ಪನೆ

ರಾಷ್ಟ್ರೀಯ ಶಿಕ್ಷಣ ನೀತಿ –2020 ರಲ್ಲಿ ಬ್ಯಾಗ್ ರಹಿತ ದಿನವನ್ನು ಆಚರಿಸುವ ಕುರಿತು ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ.

4.26 ಪ್ರತಿಯೊಬ್ಬ ವಿದ್ಯಾರ್ಥಿಯು 6 ರಿಂದ 8ನೇ ತರಗತಿಯ ಅವಧಿಯಲ್ಲಿ, ರಾಜ್ಯಗಳು ಮತ್ತು ಸ್ಥಳೀಯ ಸಮುದಾಯಗಳು ನಿರ್ಧರಿಸಿದಂತೆ ಮತ್ತು ಸ್ಥಳೀಯ ಕೌಶಲ ಅಗತ್ಯಗಳಿಗೆ ಪೂರಕವಾಗಿ ಮರಗೆಲಸ, ವಿದ್ಯುತ್ ಕೆಲಸ, ಲೋಹದ ಕೆಲಸ, ತೋಟಗಾರಿಕೆ, ಕುಂಬಾರಿಕೆ ಮುಂತಾದ ಪ್ರಮುಖ ವೃತ್ತಿಪರ ಕರಕೌಶಲ್ಯಗಳ ಸಮೀಕ್ಷೆ ಮತ್ತು ಮಾಡಿ ಕಲಿಯುವ ಅನುಭವವನ್ನು ನೀಡುವ ಒಂದು ಮೋಜಿನ ಕೋರ್ಸ್‌ಅನ್ನು ತೆಗೆದುಕೊಳ್ಳುತ್ತಾನೆ. NCFSE 2020–21ರ ಚೌಕಟ್ಟನ್ನು ರೂಪಿಸುವಾಗ 6–8ನೇ ತರಗತಿಗಳಿಗಾಗಿ ಅಭ್ಯಾಸ ಆಧಾರಿತ ಪಠ್ಯಕ್ರಮವನ್ನು NCERT ಸೂಕ್ತವಾಗಿ ವಿನ್ಯಾಸಗೊಳಿಸುತ್ತದೆ. 6–8 ನೇ ತರಗತಿಯ ಸಮಯದಲ್ಲಿ ಎಲ್ಲಾ ವಿದ್ಯಾರ್ಥಿಗಳು 10 ದಿನಗಳ ಬ್ಯಾಗ್ ರಹಿತ ಅವಧಿಯಲ್ಲಿ ಭಾಗವಹಿಸುತ್ತಾರೆ, ಅಲ್ಲಿ ಅವರು ಸ್ಥಳೀಯ ವೃತ್ತಿಪರ ತಜ್ಞರಾದ ಬಡಗಿಗಳು, ತೋಟಗಾರರು, ಕುಂಬಾರರು, ಕಲಾವಿದರು ಮುಂತಾದವರೊಂದಿಗೆ ತರಬೇತಿ ಪಡೆಯುತ್ತಾರೆ. ವೃತ್ತಿಪರ ವಿಷಯಗಳನ್ನು ಕಲಿಯಲು ಇದೇ ರೀತಿಯ ತರಬೇತಿ (internship) ಅವಕಾಶಗಳು, (ರಜಾ ಅವಧಿಗಳು ಸೇರಿದಂತೆ) 6–12ನೇ ತರಗತಿಗಳ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಮಾಡಬಹುದು. ಆನ್‌ಲೈನ್ ವಿಧಾನದಲ್ಲಿಯೂ ಸಹ ವೃತ್ತಿಪರ ಕೋರ್ಸ್‌ಗಳು ಲಭ್ಯವಾಗುವಂತೆ ಮಾಡಲಾಗುವುದು. ಕಲೆ, ರಸಪ್ರಶ್ನೆಗಳು, ಕ್ರೀಡೆಗಳು ಮತ್ತು ವೃತ್ತಿಪರ ಕರಕೌಶಲ್ಯವನ್ನು ವಸ್ತುಗಳನ್ನು ಒಳಗೊಂಡ ವಿವಿಧ ರೀತಿಯ ಪುಷ್ಟೀಕರಣ ಚಟುವಟಿಕೆಗಳಿಗಾಗಿ ವರ್ಷವಿಡೀ ಬ್ಯಾಗ್ ರಹಿತ ದಿನಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ಪ್ರಾಮುಖ್ಯತೆಯ ಸ್ಥಳಗಳು / ಸ್ಮಾರಕಗಳಿಗೆ ಭೇಟಿ ನೀಡುವುದು, ಸ್ಥಳೀಯ ಕಲಾವಿದರು ಮತ್ತು ಕುಶಲಕರ್ಮಿಗಳನ್ನು ಭೇಟಿ ಮಾಡುವುದು ಮತ್ತು ಅವರ ಗ್ರಾಮ / ತಹಸಿಲ್ / ಜಿಲ್ಲೆ / ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನಿಯಮಿತವಾಗಿ ಭೇಟಿ ನೀಡುವ ಮೂಲಕ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲಾಗುವುದು.